ರೈತರ ಕೃಷಿ ಉತ್ಪಾದನೆಗೆ ಬಿತ್ತನೆ ಬೀಜ.

1053 (1227): ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿರುವ ರೈತರಿಗೆ ಕೃಷಿ ಉತ್ಪಾದನೆಗೆ ಅಗತ್ಯವಿರುವ ಬಿತ್ತನೆ ಬೀಜ ಹಾಗೂ ಎಣ್ಣೆ ಬೀಜಗಳನ್ನು ಸುಲಭ ದರದಲ್ಲಿ ತ್ವರಿತವಾಗಿ ಒದಗಿಸಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ;

ಆ. ಈ ಬೀಜಗಳನ್ನು ಹೊರ ರಾಜ್ಯಗಳಿಂದ ತರಿಸುವುದರಿಂದ ಬೆಲೆ ಏರಿಕೆ ದುಬಾರಿ ಆಗುವುದಿಲ್ಲವೇ;

ಇ. ಕೃಷಿ ಉತ್ಪಾದನೆಗೆ ಅವಶ್ಯವಿರುವ ಸಾಮಗ್ರಿಗಳ ತ್ವರಿತ ಪೂರೈಕೆಗೆ ಇರುವ ಆತಂಕಗಳೇನು ? ಹಾಗೂ ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕಾರ್ಯಗಳೇನು ?

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ಹೌದು, ಬಿತ್ತನೆ ಬೀಜ (ಎಣ್ಣೆ ಕಾಳು ಬೀಜಗಳು ಒಳಗೊಂಡಂತೆ) ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮತ್ತು ಸುಲಭ ದರದಲ್ಲಿ ಬೀಜ ವಿತರಣಾ ಮಳಿಗೆಗಳ ಮೂಲಕ ರೈತರಿಗೆ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಹಾಗೂ ಕೆಲವು ಯೋಜನೆಗಳಡಿಯಲ್ಲಿ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಸರಬರಾಜು ಮಾಡಲಾಗುತ್ತಿದೆ.

ಆ. ರಾಜ್ಯದಲ್ಲಿ ಬಿತ್ತನೆ ಬೀಜದ ಬೇಡಿಕೆಗೆ ಅನುಸಾರವಾಗಿ ಬೀಜೋತ್ಪಾದನೆಯನ್ನು ತೆಗೆದುಕೊಂಡು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಿ ರೈತರಿಗೆ ದೊರೆಯುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ಆದರೂ ಸಹ ಅಲ್ಪ ಪ್ರಮಾಣದಲ್ಲಿ ರಾಜ್ಯದಲ್ಲಿ ಉತ್ಪಾದಿಸಲಾಗದ ಬೀಜಗಳನ್ನು ಮತ್ತು ಬೇಡಿಕೆಯನ್ನು ಅನುಸರಿಸಿ ಕೊರತೆಯಾದ ಬೀಜಗಳನ್ನು ಹೊರ ರಾಜ್ಯಗಳಿಂದ ತರಿಸಿಕೊಳ್ಳಲಾಗುತ್ತಿದೆ. ಕೇವಲ ವಿಶೇಷ ಸಂದರ್ಭದಲ್ಲಿ ಹೊರ ರಾಜ್ಯಗಳಿಂದ ತರಿಸಿಕೊಳ್ಳಲಾದ ಬೀಜಗಳ ದರಗಳು ನಿಗಮ ಉತ್ಪಾದಿಸುವ ಬೀಜಗಳ ದರಗಳಿಗೆ ಹೋಲಿಸುವ ರೀತಿಯಲ್ಲಿ ಇದೆ. ಅಲ್ಲದೆ ದುಬಾರಿ ಬೆಲೆ ಆಗುತ್ತಿಲ್ಲ.

ಇ. ಕೃಷಿ ಇಲಾಖೆಗೆ ಅಗತ್ಯವಿರುವ ಸಾಮಗ್ರಿಗಳ ಪೈಕಿ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಸಸ್ಯ ಸಂರಕ್ಷಣೆ ಔಷಧಿಗಳು ಮುಖ್ಯವಾದವು. ಬಿತ್ತನೆ ಬೀಜ ಬೇಡಿಕೆಗಳಿಗನುಸಾರವಾಗಿ ವಿವರಗಳನ್ನು ಹಂಗಾಮು ಪ್ರಾರಂಭವಾಗುವುದಕ್ಕೆ ಮುಂಚೆ ಬೀಜ ವಿತರಣಾ ಸಂಸ್ಥೆಗಳಿಗೆ ತಿಳಿಸಲಾಗುವುದು. ಇದರಿಂದಾಗಿ ಬೀಜ ವಿತರಣಾ ಸಂಸ್ಥೆಗಳು ಸಾಕಷ್ಟು ಮಾರಾಟ ಮಳಿಗೆಗಳನ್ನು ತೆರೆದು ಸರಬರಾಜು ಮಾಡಲು ಅನುಕೂಲವಾಗುವಂತೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಕೆಲವು ಹವಾಮಾನ ವೈಪರೀತ್ಯಗಳಿಂದಾಗಿ ನಿರ್ದಿಷ್ಟ ಬೆಳೆ:ತಳಿಯ ಬೀಜ ಬೇಡಿಕೆಯಲ್ಲಿ ಬದಲಾವಣೆ ಕಂಡು ಬರುವ ಸಾಧ್ಯತೆಗಳಿವೆ. ಇಂತಹ ಸಂದರ್ಭಗಳಲ್ಲಿ ರೈತರಿಗೆ ದೊರೆಯುವ ಗುಣಮಟ್ಟದ ಬೀಜಗಳನ್ನು ಗುರುತಿಸಿ ವಿತರಣೆಗೆ ವ್ಯವಸ್ಥೆ ಮಾಡಲಾಗುತ್ತದೆ. ಇದಲ್ಲದೆ, ಕೇಂದ್ರ ಸರ್ಕಾರದ ಮಾರ್ಗದರ್ಶನದ ಪ್ರಕಾರ ಕಾಪು ದಾಸ್ತಾನು ಯೋಜನೆಯಲ್ಲಿ ಕೆಲವು ಬೆಳೆ:ತಳಿಗಳ ಬೀಜವನ್ನು ದಾಸ್ತಾನು ಇಡುವ ಕಾರ್ಯವನ್ನು ಹಮ್ಮಿಕೊಂಡಿದೆ.

ಧಾರಣೆ ಬೆಲೆ ಯೋಜನೆಗೆ ಒಳಪಡುವ ನೇರ ಸಾರಜನಕ, ರಸಗೊಬ್ಬರಗಳ ಬಗ್ಗೆ ಹೇಳುವುದಾದರೆ ರಾಜ್ಯಕ್ಕೆ ಅವಶ್ಯಕತೆ ಇರುವಷ್ಟು ಪ್ರಮಾಣವನ್ನು ಕೇಂದ್ರ ಸರ್ಕಾರದಿಂದ ಹಂಚಿಕೆ ಪಡೆದು, ಜಿಲ್ಲಾವಾರು ಸರಬರಾಜು ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಅನಿಯಂತ್ರಣಗೊಂಡಿರುವ

ರಂಜಕ, ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನೂ ಸಹ ವಿವಿಧ ತಯಾರಕರ ಮೂಲಕ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ.

ಸಸ್ಯ ಸಂರಕ್ಷಣಾ ಔಷಧಿಗಳ ಪೂರೈಕೆ ಮಾಡುವಲ್ಲಿ ಯಾವುದೇ ತೊಂದರೆಗಳಿರುವುದಿಲ್ಲ. ಈ ಸಸ್ಯ ಸಂರಕ್ಷಣಾ ಔಷಧಿಗಳನ್ನು ಕರ್ನಾಟಕ ರಾಜ್ಯ ಕೃಷಿ ಕೈಗಾರಿಕಾ ನಿಗಮ ಮತ್ತು ಕರ್ನಾಟಕ ಸಹಕಾರ ಮಾರಾಟ ಮಹಾ ಮಂಡಳಿಗಳ ಮಾರಾಟ ಕೇಂದ್ರಗಳ ಮುಖಾಂತರ ರೈತರಿಗೆ ಅವಶ್ಯಕತೆಗೆ ತಕ್ಕಂತೆ ಪೂರೈಸಲಾಗುತ್ತದೆ. ಇದಲ್ಲದೆ ಸಹಕಾರಿ ಸಂಘಗಳು ಮತ್ತು ಖಾಸಗಿ ಮಾರಾಟ ಕೇಂದ್ರಗಳ ಮುಖಾಂತರ ಇವುಗಳ ವಿತರಣೆ ಕೈಗೊಳ್ಳಲಾಗುತ್ತಿದೆ.

ಬೆಳಗಾವಿ ಜಿಲ್ಲಾಪರಿಷತ್ತಿನವರು ಸೂಚಿಸಿದ ಸ್ಥಳಗಳಲ್ಲಿ ಕೊಳವೆ ಬಾವಿಗಳನ್ನು ತೋಡಿಸಿದ ವಿವರ.

1054 (1870): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾವಿ ಜಿಲ್ಲಾಪರಿಷತ್ತಿನವರು ಬೆಳಗಾವಿ ಜಿಲ್ಲೆಯಲ್ಲಿ ಪಿ.ಹೆಚ್.ಇ. ಇಂಜಿನಿಯರಿಂಗ್ ವಿಭಾಗದವರಿಗೆ ಎಷ್ಟು ಕೊಳವೆ ಬಾವಿಗಳನ್ನು ತೋಡಿಸಲು ಸನ್ 1990–91, 1991–92 ಹಾಗೂ 1992–93ನೇ ಸಾಲಿನಲ್ಲಿ ತಿಳಿಸಿದ್ದಾರೆ;

ಆ. ಹಾಗಿದ್ದಲ್ಲಿ ಪಿ.ಹೆಚ್.ಇ. ಇಂಜಿನಿಯರಿಂಗ್ ವಿಭಾಗದವರು ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಈ ಮೇಲೆ ಹೇಳಿದ ವರ್ಷಗಳಲ್ಲಿ ತೋಡಿಸಿರುವರು. (ತಾಲ್ಲೂಕುವಾರು ವಿವರ ಕೊಡುವುದಾಗಬೇಕು);

ಇ. ಜಿಲ್ಲಾಪರಿಷತ್ ಇಂಜಿನಿಯರಿಂಗ್ ವಿಭಾಗದವರು ಕೊಳವೆ ಬಾವಿಗಳನ್ನು ತೋಡಲು ಪಿ.ಹೆಚ್.ಇ. ಇಂಜಿನಿಯರಿಂಗ್ ವಿಭಾಗದವರಿಗೆ ಆರ್ಡರ್ ಕೊಟ್ಟರೂ ಸಹ ಅವರು ಕೊಳವೆ ಬಾವಿಗಳನ್ನು ತೋಡದೆ ಇದ್ದ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ ಸರ್ಕಾರದವರು ಈ ಕೊಳವೆ ಬಾವಿಗಳನ್ನು ತೋಡದೆ ಇದ್ದ ಪಿ.ಹೆಚ್.ಇ. ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳುವರು;

ಉ. ಪಿ.ಹೆಚ್.ಇ. ಇಂಜಿನಿಯರಿಂಗ್ ವಿಭಾಗದ ಮೆಕ್ಯಾನಿಕಲ್ ಸಬ್ ಡಿವಿಜನ್‌ನವರು ಹಾಗೂ ಪಿ.ಹೆಚ್.ಇ. ಅವರು ಕೊಳವೆ ಬಾವಿಗಳನ್ನು ತೋಡದೆ ಇದ್ದ ಕಾರಣ ಖಾಸಗಿಯವರಿಂದ ಕೊಳವೆ ಬಾವಿಗಳನ್ನು ತೋಡಿಸುವ ಸಂಗತಿ ನಿಜವೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ವರ್ಷ	ಪಿ.ಹೆಚ್.ಇ. ವಿಭಾಗದವರು ಕೊರೆಯಬೇಕಾದ ಕೊಳವೆ ಬಾವಿಗಳು.
1990–91	396
1991–92	374